ಪರ್ಷಿಯನ್ ಹಾಗೂ ಹಿಂದವಿಯಲ್ಲಿ ತನ್ನ ಬದುಕಿನುದ್ದಕ್ಕೂ ವಿವಿಧ ಬಗೆಯ ಕಾವ್ಯಪ್ರಭೇದಗಳು, ಗದ್ಯ ಗ್ರಂಥಗಳು, ಇತ್ಯಾದಿಗಳನ್ನು ರಚಿಸಿದನು. ಒಂದು ಅಂದಾಜಿನ ಪ್ರಕಾರ, ಖುಸ್ರೋ 99 ಕೃತಿಗಳನ್ನಲ್ಲದೆ ಸುಮಾರು ನಾಲ್ಕು ಲಕ್ಷ ಗೀತೆಗಳನ್ನು ರಚಿಸಿದನು. ಇವನ ಆಶ್ರಯದಾತರೆಲ್ಲರೂ, ಮುಖ್ಯವಾಗಿ ಜಲಾಲುದ್ದೀನ್ ಖಿಲ್ಜಿ ಮತ್ತು ಅಲ್ಲಾಉದ್ದೀನ್ ಖಿಲ್ಜಿ, ಕಾವ್ಯಪ್ರೇಮಿಗಳಾಗಿದ್ದುದರಿಂದ ಖುಸ್ರೋನ ಕಾವ್ಯರಚನೆ ಎಲ್ಲಿಯೂ ಕುಂಟಬೇಕಾಗಿರಲಿಲ್ಲ.

ಅಮೀರ್ ಖುಸ್ರೋನ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ದೆಹಲಿಯಲ್ಲಿದ್ದು, ಐವರು ಸುಲ್ತಾನರ ಆಸ್ಥಾನ ಕವಿಯಾಗಿದ್ದು, ತನ್ನ ಆಶ್ರಯದಾತರನ್ನು ಹೊಗಳುವ 'ಪ್ರಶಂಸಾ ಕವನ'ಗಳನ್ನು ಬರೆಯುವ ಆಸ್ಥಾನಿಕನೇ ನಿಜಾಮುದ್ದೀನ್ ಔಲಿಯಾನ ಆಪ್ತ ಶಿಷ್ಯನಾಗಿ, ಅವನಿಂದ ಆಧ್ಯಾತ್ಮಿಕ ತತ್ವಗಳನ್ನು ಮೈಗೂಡಿಸಿಕೊಂಡು ಸೂಫಿ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವ ಸಂತನಾಗಿದ್ದನು; ಪರಸ್ಪರ ವಿರುದ್ಧವಾಗಿರುವ ಇವೆರಡು ಆಯಾಮಗಳೂ ಖುಸ್ರೋನ ಬದುಕಿನಲ್ಲಿದ್ದುವು. ಅವನ ಜೀವನಚರಿತ್ರಕಾರರು ಹೇಳುವಂತೆ, ಅವನ ರಾಜಾಸ್ಥಾನದ ಅನುಭವಗಳು ಹಾಗೂ ಅಧಿಕಾರಕ್ಕಾಗಿ ಅರಮನೆಯಲ್ಲಿ ನಡೆಯುತ್ತಿದ್ದ ಷಡ್ಯಂತ್ರಗಳು ಅವನನ್ನು ಮತ್ತಷ್ಟು ಆಧ್ಯಾತ್ಮಿಕ ಚಿಂತನೆಯತ್ತ ದೂಡಿದವು. ಇಷ್ಟಂತೂ ಸತ್ಯ: ಖುಸ್ರೋ ಬೂಟಾಟಿಕೆಯ ಬದುಕನ್ನು ಬಾಳಲಿಲ್ಲ. ಆದರೆ ದೆಹಲಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದನು. ಅವನ ಕಾಲದಲ್ಲಿ ದೆಹಲಿ ಉದಾರ ಭಾವನೆಯ (ಕಾಸ್ಮೋಪಾಲಿಟನ್) ನಗರವಾಗಿದ್ದು, ಅದರಲ್ಲಿದ್ದ ಶೈಕ್ಷಣಿಕ ಸಂಸ್ಥೆಗಳಿಗಾಗಿ ಇಸ್ಲಾಮಿಕ್ ವಿಶ್ವದೆಲ್ಲೆಡೆಯೂ ಪ್ರಸಿದ್ಧವಾಗಿತ್ತು; ವಿದ್ವಾಂಸರಿಗೆ ಹಾಗೂ ಕವಿಗಳಿಗೆ ಹೆಸರಾಂತ ಆಶ್ರಯದಾಣವಾಗಿತ್ತು. ಒಮ್ಮೆ, ಕಾರಣಾಂತರಗಳಿಂದ ದೆಹಲಿಯನ್ನು ಬಿಟ್ಟು ಬೇರೆಲ್ಲೋ ನೆಲಸಬೇಕಾಗಿ ಬಂದ ಸಂದರ್ಭದಲ್ಲಿ ತನ್ನ ಮನಃಸ್ಥಿತಿಯನ್ನು ಒಂದು ಕವನದಲ್ಲಿ ಖುಸ್ರೋ ಹೀಗೆ ವರ್ಣಿಸುತ್ತಾನೆ:

ನನ್ನ ಮನೆ ಇಸ್ಲಾಮ್‌ನ ಕಲಶ;
ಅದು ವಿಶ್ವದ ಎಲ್ಲಾ ರಾಜರುಗಳನ್ನೂ ತನ್ನತ್ತ ಸೆಳೆಯುವ ಪವಿತ್ರ ಸ್ಥಳ.
ದೆಹಲಿ ಅಕಳಂಕ ಸ್ವರ್ಗದ ಅವಳಿ;
ಭೂಮಿಯ ಮೇಲೆ ಬರೆಯಲ್ಪಟ್ಟಿರುವ ದೈವಿಕ ಸಿಂಹಾಸನದ ಪ್ರತಿರೂಪ.

ಅಮೀರ್ ಖುಸ್ರೋ ಕವಿಯಷ್ಟೇ ಅಲ್ಲದೆ ಶ್ರೇಷ್ಠ ಸಂಗೀತಜ್ಞನೂ ಆಗಿದ್ದನು. ಇತಿಹಾಸಕಾರರ ಪ್ರಕಾರ, ಭಾರತೀಯ ಸಂಗೀತಕ್ಷೇತ್ರಕ್ಕೆ ಖುಸ್ರೋನ ಕೊಡುಗೆ ಅಪಾರ. ಅವನು ಪರ್ಷಿಯನ್ ಹಾಗೂ ಭಾರತೀಯ ಸಂಗೀತ ಪರಂಪರೆಗಳನ್ನು ಒಂದೆಡೆ ತಂದು, ಹೊಸ ಬಗೆಯ ಸಂಗೀತ ಪರಂಪರೆಯನ್ನು ಪ್ರಾರಂಭಿಸಿದನು; ಇಂದು 'ಹಿಂದುಸ್ಥಾನಿ ಸಂಗೀತ' ಎಂದು ಕರೆಯಲಾಗುವ ಪರಂಪರೆ ಮೂಲತಃ ಖುಸ್ರೋನ ಪ್ರಯೋಗಗಳನ್ನು ಆಧರಿಸಿದೆ. ಖುಸ್ರೋನ ಕವನಗಳು ಸಾರ್ವಜನಿಕವಾಗಿ ಹಾಡಲಾಗುತ್ತಿದ್ದುದರಿಂದ ಅವುಗಳ ರಾಗ-ಸ್ವರ ಸಂಯೋಜನೆಯನ್ನು ಸ್ವತಃ ಖುಸ್ರೋ ಮಾಡುತ್ತಿದ್ದನಂತೆ. ತನ್ನ ಒಂದು ಕೃತಿಯಲ್ಲಿ ಖುಸ್ರೋ ಅನೇಕ ಸಂಗೀತ ವಾದ್ಯಗಳನ್ನು ಹಾಗೂ ಅಂದಿನ ಕಾಲದಲ್ಲಿ ಪ್ರಸಿದ್ಧರಾಗಿದ್ದ ಗಾಯಕರನ್ನೂ ವರ್ಣಿಸುತ್ತಾನೆ. ಇಂದು ಅವನ ಕೊಡುಗೆಯನ್ನು ಆಧಾರಪೂರ್ವಕವಾಗಿ ಹೇಳಬೇಕೆಂದರೆ, ಅವನು ಸಿತಾರ್ ಮತ್ತು ತಬಲಾ ವಾದ್ಯಗಳನ್ನು; 'ಖಯಾಲ್' ಗಾಯನ ಶೈಲಿಯನ್ನು, ಹಾಗೂ ಸರ್ಜ಼್‌ಗಿರಿ, ಶಹಾನ, ಜ಼ಿಲ್ಫ್ ರಾಗಗಳನ್ನು ಭಾರತೀಯ ಸಂಗೀತ ಕ್ಷೇತ್ರಕ್ಕೆ ಪರಿಚಯಿಸಿದನು. ಕಾವ್ಯ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ತನಗಿದ್ದ ಅಸಾಧಾರಣ ಪರಿಣತಿಯಿಂದಾಗಿ ತನ್ನನ್ನು 'ತೋತಾ-ಎ-ಹಿಂದ್' (ಹಿಂದುಸ್ತಾನದ ಗಿಣಿ) ಎಂದು ಕರೆದುಕೊಳ್ಳುತ್ತಿದ್ದನು.

ಅಮೀರ್ ಖುಸ್ರೋನ ಆಧ್ಯಾತ್ಮಿಕ ಚಿಂತನೆಯನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅವನದು 'ಪ್ರೇಮದ ತತ್ವಶಾಸ್ತ್ರ.' ಇದು ಒಟ್ಟಾರೆ ಸೂಫಿ ಧರ್ಮದ ನಿಲುವೂ ಅಹುದು. ಈ ಪ್ರೇಮವು ಹೆಚ್ಚಿನ ಸಂದರ್ಭಗಳಲ್ಲಿ 'ದೈವಿಕ ಪ್ರೇಮ'ವಾಗಿ ಮಾರ್ಪಡುತ್ತದೆ, ಮತ್ತು ಆ ಸಂದರ್ಭದಲ್ಲಿ ಕವಿ ತನ್ನನ್ನು 'ವಧು' ಎಂದು ಬಗೆಯುತ್ತಾನೆ. (ಆದರೆ, ಖುಸ್ರೋನ 'ದೈವಿಕ ಪ್ರೇಮ'ದ ಬಗ್ಗೆ ನಾವು ಮಾತನಾಡುವಾಗ ಆ 'ದೈವಿಕ ಪ್ರೇಮ'ವು ಅವನ ಗುರುವಿಗೂ ಅನ್ವಯಿಸುತ್ತದೆ ಎಂಬುದನ್ನು ಮರೆಯಬಾರದು; ಅವನು ಅನೇಕ ಹೃದಯಂಗಮ ಕವನಗಳನ್ನು ಔಲಿಯಾನ ಬಗ್ಗೆ ಬರೆದಿದ್ದಾನೆ ಮತ್ತು ಅವುಗಳಲ್ಲಿ